ಈ) 2015–16ನೇ ಸಾಲಿಗೆ ಒಟ್ಟು 07 ಕೊಠಡಿಗಳಿಗೆ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿತ್ತು. ಆರ್.ಎಂ.ಎಸ್.ಎ ನಿಯಮಾನುಸಾರ ಕೊಠಡಿಗಳನ್ನು ನಿರ್ಮಿಸಲು ಸ್ಥಳಾವಕಾಶವಿಲ್ಲವೆಂದು ಉಪನಿರ್ದೇಶಕರ ವರದಿ ನೀಡಿದ್ದು, ಸಲ್ಲಿಸಿದ್ದ ಪ್ರಸ್ತಾವನೆಯೂ ಅನುಮೋದನೆ ಆಗಿರುವುದಿಲ್ಲ. ನಿವೇಶನ ದೊರೆತ ನಂತರ ಅನುದಾನ ಲಭ್ಯತೆ ಆಧರಿಸಿ ಕ್ರಮ ವಹಿಸಲಾಗುವುದು.

ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ ಯೋಜನೆಗೆ ಪ್ರಗತಿ

2460(2926); ಶ್ರೀ ಗೋಪಾಲ ಪೂಜಾರಿ ಕೆ. (ಬೈಂದೂರು)

ಅ) ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ, ಯೋಜನೆಯಡಿ ಬೈಂದೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಪ್ರೌಢಶಾಲೆಗಳಿಗೆ ಎಷ್ಟು ಕಟ್ಟಡಗಳು ಮಂಜೂರಾಗಿವೆ. (ಶಾಲಾವಾರು ವರದಿ ಸಲ್ಲಿಸುವುದು)

ಆ) ಮಂಜೂರಾದ ಕಟ್ಟಡಗಳ ಪ್ರಗತಿ ಯಾವ ಹಂತದಲ್ಲಿದೆ;

ಇ) ನಿಗದಿತ ಅವಧಿಯಲ್ಲಿ ಕಟ್ಟಡಗಳ ಕಾಮಗಾರಿ ಪೂರ್ಣಗೊಳ್ಳದಿರಲು ಕಾರಣಗಳೇನು;

ಈ) ಕಾಮಗಾರಿಗಳ ಅನುಷ್ಠಾನ ತುಂಬಾ ವಿಳಂಬವಾಗಿ ನಡೆಯುತ್ತಿರುವುದರಿಂದ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಕಿಮ್ಮನೆ ರತ್ನಾಕರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು)

ಅ) ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ ಯೋಜನೆಯಡಿಯಲ್ಲಿ 7 ಕಟ್ಟಡ/ಕೊಠಡಿಗಳು ಮಂಜೂರಾಗಿವೆ. ಶಾಲಾವಾರು ವಿವರ ಕೆಳಕಂಡಂತಿರುತ್ತದೆ.

1. ಸ.ಸಂ.ಪ.ಪೂ.ಕಾಲೇಜು, ಉಪ್ಪುಂದ.
2. ಸ.ಸಂ.ಪ.ಪೂ.ಕಾಲೇಜು, ಕಂಬದಕೋನೆ.

3. ಸ.ಸಂ.ಪ.ಪೂ.ಕಾಲೇಜು, ನವುಂದ
4. ಸ.ಸಂ.ಪ.ಪೂ.ಕಾಲೇಜು, ಶಿರೂರು.
5. ಸ.ಸಂ.ಪ.ಪೂ.ಕಾಲೇಜು, ಕಿರಿಮಂಜೇಶ್ವರ.
6. ಸ.ಸಂ.ಪ್ರೌ.ಶಾಲೆ, ಆಲೂರು.
7. ಸ.ಪ್ರೌ.ಶಾಲೆ, ಚಿತ್ತೂರು.

ಆ) ಪ್ರಗತಿಯ ವಿವರವನ್ನು ಅನುಬಂಧ (1)ರಲ್ಲಿ ಲಗತ್ತಿಸಿದೆ.

ಇ)

1. ನಿವೇಶನದ ಕೊರತೆ ಹಾಗೂ ನಿವೇಶನ ಹಸ್ತಾಂತರಿಸುವಲ್ಲಿ ಆಗಿರುವ ವಿಳಂಬ.
2. ಮಣ್ಣಿನ ಸಾಂದ್ರತೆಗೆ ಅನುಗುಣವಾಗಿ ವಿನ್ಯಾಸ ಮತ್ತು ನಕ್ಷೆಗಳನ್ನು ರಚಿಸುವುದು.

ಈ)

1. ಪ್ರಸ್ತುತ ಈ ಯೋಜನೆಗೆ ಅಗತ್ಯವಿರುವ ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳಲಾಗಿದೆ ಹಾಗೂ 4 ಕಂದಾಯ ವಿಭಾಗಗಳಿಗೆ 8 ಸಹಾಯಕ ಕಾರ್ಯಪಾಲಕ ಅಭಿಯಂತರರನ್ನು ಹಾಗೂ ಪ್ರತಿ ಜಿಲ್ಲೆಗೆ ಒಬ್ಬ ಸಹಾಯಕ ಅಭಿಯಂತರರನ್ನು ಹೊರಗುತ್ತಿಗೆ ಸೇವೆಯಲ್ಲಿ ಪಡೆಯಲಾಗಿದೆ. ಇವರ ಮೂಲಕ ಕಾಮಗಾರಿಗಳ ಉಸ್ತುವಾರಿ ಮತ್ತು ಪರಿವೀಕ್ಷಣೆ ಕಾರ್ಯವನ್ನು ನಿರ್ವಹಿಸುತ್ತಿದ್ದು, ಶೀಘ್ರಗತಿಯಲ್ಲಿ ಕಾಮಗಾರಿಗಳನ್ನು ಪೂರ್ಣಗೊಳಿಸಲು ಕ್ರಮವಹಿಸಲಾಗಿರುತ್ತದೆ.
2. ಪ್ರಗತಿಯಲ್ಲಿರುವ ಕಟ್ಟಡ ಕಾಮಗಾರಿಗಳ ಅಂದಾಜು ಪಟ್ಟಿ ವಿನ್ಯಾಸ, ವರ್ಕ್‌ಸ್ಲಿಪ್, ಹೆಚ್ಚುವರಿ ಐಟಂಗಳ ದರಪಟ್ಟಿಗಳ ನಿಗಧಿ ಮತ್ತು ಪರಿಷ್ಕೃತ ಅಂದಾಜುಗಳ ಪರಿಶೀಲನೆ ಮತ್ತು ಮಾರ್ಗದರ್ಶನಕ್ಕಾಗಿ 03 ಜನ ನಿವೃತ್ತ ಮುಖ್ಯ ಇಂಜಿನಿಯರ್‌ಗಳನ್ನು ಒಳಗೊಂಡ ತಾಂತ್ರಿಕ ಸಲಹಾ

ಸಮಿತಿಯನ್ನು ರಚಿಸಲಾಗಿದ್ದು, ಸಮಿತಿಯು ಈ ದಿಶೆಯಲ್ಲಿ ಕಾರ್ಯಪ್ರವೃತ್ತವಾಗಿದೆ.

3. ಎಂ.ಹೆಚ್.ಆರ್.ಡಿ ನವದೆಹಲಿ ರವರ ನಿಯಮಾವಳಿಗಳಂತೆ 3ನೇ ವ್ಯಕ್ತಿ ಸಂಸ್ಥೆಗಳಿಂದ ಕಾಮಗಾರಿಗಳ ಗುಣಮಟ್ಟ ಕಾಪಾಡಲು ಹಾಗೂ ತಾಂತ್ರಿಕ ಲೆಕ್ಕ ಪರಿಶೀಲನಾ ಸಮಿತಿಯನ್ನು ರಚಿಸಲಾಗಿರುತ್ತದೆ. ಈ ಸಂಸ್ಥೆಗಳು ಅವಿರತವಾಗಿ ಕಾರ್ಯನಿರತವಾಗಿದ್ದು, ಗುಣಮಟ್ಟದ ಕಾಮಗಾರಿಗಳ ಪ್ರಗತಿಗೆ ಕ್ರಮವಹಿಸಲಾಗುತ್ತಿದೆ.

ANNEXURE - 1

Construction of Additional rooms for Strengthening of existing Govt. High Schools

Block : BYNDOOR

Sl. No.	Type	Name of the School	Contract amount in Lakhs	Total Expendeture in Lakhs	Work not started	Status of work						Remarks
						Foundation (FO)	Plinth (P)	Lintel (L)	Roof (R)	Finishing (F)	Completed (C)	
1	T-3	GOVT PU College, Uppunda	129.50	0.00		1						Steel fabrication done as per Old drawing. Now Drawing is changed for New SBC. Awaiting for clearence.

2	T-61	GOVT PU College, Kambadakone	55.71	0.00					1			ground floor Slab concrete completed.
3	T-61	Govt. Composite PU College, Navunda	55.71	26.34					1			Slab concrete and CC block completed.
4	T-61	GOVT PU College, Shiruru	55.71	18.04					1			Slab concrete and CC block completed.
5	T-64	GHS Kirimanjeshwara	50.00	27.11						1		1st floor slab work completed.
6	T-74	Govt Composite High School, Alcor	35.47	15.64					1			Ground floor slab completed.
Total			382.10	87.13	0	1	0	0	4	1	0	
1	T-1	GHPS Chitturu (Construction of New School buildings for Upgradation)	81.07	12.66			1					Plinth beam fabrication work in progress.